

ಇನ್ನೊಬ್ಬನ್ನ ಕರ್ಕೊಂಬರ್ತೀನಿ, ಅವನ್ನು ಕೂಲಿ ಕೊಡಬೇಕಲ್ಲ' ಅಂದ. ಅಮ್ಮ 'ಅದೆಲ್ಲ ಆಗೊಲ್ಲ, ನಾನು ಒಂದು ಕುರ್ಚಿಗೆ ನೂರು ಕೊಡ್ತಿದ್ದೆ. ಏನೋ ಮನೆ ಮುಂದೆ ಬಂದಿದೀಯೆಲ್ಲ ಅಂತ ಇಪ್ಪತ್ತೈದು ಜಾಸ್ತಿ ಕೊಡ್ತೀನಿ, ಮಾಡಿಕೊಡು' ಅಂದರು ಗತ್ತಿನಿಂದ. 'ಆಗಲ್ಲ ತಾಯಿ ಗಿಟ್ಟಲ್ಲ ಬಿಡಿ' ಎಂದು ಎದ್ದು ನಿಂತ.

ಅವನೆಲ್ಲಾದರೂ ಹೊರಟೇ ಬಿಟ್ಟರೆ ಅನ್ನುವ ದಿಗಿಲಾಗಿ 'ಅಷ್ಟಕ್ಕೆ ಎದ್ದರೆ ಆಯ್ತು? ವ್ಯಾಪಾರ ಮಾಡೋರ ಲಕ್ಷಣವಾ ಇದು. ಇನ್ನೊಂದು ಮಾತು ನೀನು ಹೇಳು. ಸರಿ ಹೋಗದಿದ್ರೆ ಬೇಡ' ಅಂದರು. 'ಇನ್ನೂರ್ ಹೇಳಿದ್ದೆ, ನೂರೆಪ್ಪತ್ತೈದಕ್ಕೆ ಮಾಡ್ತೀನಿ. ಬೆಳ್ಬೆಳಗ್ಗೆ ವ್ಯಾಪಾರ. ಕೈಗೆ ಬಂದಿದ್ದು ಕೈಬಿಡಬಾರದು ಅಂತ...' ಅಂದ. 'ಅದೆಲ್ಲ ಬೇಡಪ್ಪ, ನೂರೈವತ್ತಕ್ಕೆ ಮಾಡಿದ್ರೆ ಸರಿ. ಅಷ್ಟಕ್ಕಾದ್ರೆ ಮಾಡು, ಇಲ್ಲದಿದ್ರೆ ಬೇಡ' ಎಂದರು ಕಡಕ್ಕಾಗಿ.

ಅವನೂ ಕಷ್ಟಪಟ್ಟು ಒಪ್ಪಿಕೊಳ್ಳುವವನಂತೆ 'ಇನ್ನೇನ್ ಮಾಡೋದು ತಾಯಿ? ಗಿಟ್ಟಕ್ಕಿಲ್ಲ. ಆದ್ರೂ ಮಾಡ್ತೀನಿ. ಯಾವ ಬಣ್ಣ ಬೇಕು ನಿಮಗೆ? ನೋಡಿ ಹೇಳಿ' ಅಂತ ಚೀಲದೊಳಗಿಂದ ಒಂದಿಷ್ಟು ಕೇನ್ ವೈರಿನ ತುಣುಕುಗಳನ್ನು ತೋರಿಸಿದ. ಬಣ್ಣಗಳನ್ನು ಮುತುವರ್ಜಿಯಿಂದ ನೋಡಿ ಅಮ್ಮ ತಿಳಿ ಗುಲಾಬಿ ಮತ್ತು ಬಿಳಿ ಬಣ್ಣದ ವೈರ್‌ಗಳನ್ನು ಮೇಲೆತ್ತಿ ಕೊಟ್ಟು 'ಇದೆರಡು ಬೆರೆಸಿ ಮಾಡಿಕೊಡಪ್ಪ. ಯಾವಾಗ ಕೆಲಸ ಮಾಡ್ತೀಯ?' ಅಂತ ಕೇಳಿದರು. 'ಇವತ್ತೆ ತಾಯಿ, ಈಗ ಈ ಹಳೇ ವೈರೆಲ್ಲ ಬಿಚ್ಚಿಬಿಟ್ಟು ಹೋಗ್ತೀನಿ. ಊಟ ಮಾಡಿಕೊಂಡು ವೈರ್ ತಗೊಂಡು ಬರ್ತೀನಿ. ಸಂಜೆ ಸಾಹೇಬ್ರು ಆಫೀಸಿಂದ ಬರೋಹೊತ್ಗೆ ಎರಡು ಕುರ್ಚೀನೂ ರೆಡಿ ಮಾಡ್ತೀನಿ. ನಂಜೊತೆ ಇನ್ನೊಬ್ಬ ಇದಾನೆ. ಇಬ್ರು ಕೆಲಸ ಹಿಡಿದ್ರೆ ಎಷ್ಟೊತ್ತು ಹೇಳಿ?' ಎಂದು ಅವನ ಚೀಲದೊಳಗಿಂದ ಒಂದು ಚಾಕು, ಬ್ಲೇಡು ತೆಗೆದು ಕುರ್ಚಿಯನ್ನೆತ್ತಿ ಅಂಗಳಕ್ಕೆ ಹಾಕಿ ಕುಳಿತ. ನೋಡು ನೋಡುತಿರುವಂತೆಯೇ ಅರ್ಧಗಂಟೆಯಲ್ಲಿ ಎಲ್ಲಾ ವೈರುಗಳನ್ನು ಕುರ್ಚಿಯಿಂದ ಸುಲಿದುಬಿಟ್ಟ! ಕುರ್ಚಿಗಳೀಗ ಮಜ್ಜೆ ಮಾಂಸಗಳನ್ನು ಕಳೆದುಕೊಂಡ ಕಬ್ಬಿಣದ ಅಸ್ಥಿಪಂಜರದಂತೆ ಕಾಣುತ್ತಿದ್ದವು. ಕುರ್ಚಿಯಿಂದ ಬಿಡಿಸಿಕೊಂಡ ಕೇನ್ ವೈರಿನ ತುಂಡುಗಳು ವಿವಿಧ ಅಳತೆಗಳಲ್ಲಿ ಅನಾಥ ಕಸದ ರಾಶಿಯಾಗಿ ಗುಂಪುಕಟ್ಟಿಕೊಂಡು ಬಿದ್ದಿತ್ತು. ಬಿಚ್ಚಿದ ಎಲ್ಲಾ ವೈರನ್ನು ಒಂದು ಮೂಲೆಗೆ ಪೊರಕೆಯಿಂದ ಅವನೇ ಒತ್ತರಿಸಿದ.

'ನಾನೀಗ ಹೋಗಿ ಊಟ ಮಾಡಿಕೊಂಡು ಕಾಸಿಮಣ್ಣನ ಕರಕೊಂಡು ಬರ್ತೀನಿ. ಒಂದ್ಗಂಟೆ ಅಷ್ಟೆ... ನೀವೀಗ ವೈರ್ ತರಕ್ಕೆ ಕಾಸ್‌ಕೊಡಿ' ಎಂದು ಎಲ್ಲಾ ದಿಗಂಬರ ಕಬ್ಬಿಣದ ಕುರ್ಚಿ ಫ್ರೇಮುಗಳನ್ನು ಅಳೆಯುವವನಂತೆ ನೋಡಿ 'ನಾಲ್ಕು ಕುರ್ಚಿಗೆ ನಾನೂರು ರೂಪಾಯಿ, ಟೀಪಾಯಿಗೆ ನೂರೈವತ್ತು ಕೊಡಿ' ಎಂದ. ಅಮ್ಮ ಒಂದು ಕುರ್ಚಿಯನ್ನು ತೋರಿ 'ಇದು ಬೇಡಪ್ಪ, ಗಟ್ಟಿಯಾಗೆ ಇದೆ. ಬೇರೆ ಕುರ್ಚಿಗಳಿಗೂ ಇದೇ ಬಣ್ಣದ ವೈರ್ ತಗೊಂಡು ಬಾ' ಅಂದಾಗ, 'ಬೇಡಿ ತಾಯಿ ಎಲ್ಲಾದಕ್ಕೂ ಹೊಸದೇ ಹಾಕಿಬಿಡೋಣ. ಐದಾರು ವರ್ಷ ಏನೂ ಆಗೊಲ್ಲ. ಇಲ್ಲದಿದ್ದರೆ ಆ ಒಂದು ಕುರ್ಚಿ ಇನ್ನಾರು ತಿಂಗಳಿಗೆ ಕಿತ್ತೋಗುತ್ತೆ. ಆಗ ಮತ್ತೆ ನೀವು ಅದನ್ನೆತ್ತಿಕೊಂಡು ಅಲೆಯಬೇಕಾಗುತ್ತೆ' ಎಂದು ಅಮ್ಮನ ಯಾವ ಅಭಿಪ್ರಾಯಕ್ಕೂ ಮನ್ನಣೆ ಕೊಡದಂತೆ ಅದನ್ನೂ ಬ್ಲೇಡಿನಿಂದ ಎಳೆದು ಕತ್ತರಿಸಿದ. ಅಮ್ಮ 'ನನ್ನತ್ರ ಇರೋದೆ ನಾನೂರು. ಉಳಿದಿದ್ದು ಯಜಮಾನರು ಬಂದ ಮೇಲೆ' ಅಂದರು.

'ಸರಿ ಕೊಡಿ ತಾಯಿ, ನಾನು ವೈರಂಗಡಿಗೆ ಸಾಲ ಹೇಳಿ ಬರ್ತೀನಿ. ನಾಳೆ ಕೊಡ್ತೀರಲ್ಲ ಆಗ ಕೊಟ್ರಾಯ್ತು' ಎಂದ. ಅಮ್ಮ ನಿರ್ವಾಹವಿಲ್ಲದೆ ನಾನೂರು ರೂಪಾಯಿಗಳನ್ನು ತಂದುಕೊಟ್ಟರು.

1983ನೇ ಇಸವಿಯಲ್ಲಿ ನಾನೂರು ರೂಪಾಯಿಗೆ ಇದ್ದ ಕಿಮ್ಮತ್ತು... ನಮ್ಮ ತಂದೆಯವರು ಎರಡು ಗಂಟೆಗೆ ಊಟಕ್ಕೆ ಬಂದರು. ಮನೆಯ ಮುಂದಿನ ಅಂಗಳದಲ್ಲಿ ಚೀರ ಹರಣಗೊಂಡ ಅಬ್ಬೇಪಾರಿ ನಾರಿಯಂತೆ ಕೂತಿದ್ದ ಕಬ್ಬಿಣದ ಕುರ್ಚಿಯ ಅಸ್ಥಿಪಂಜರಗಳನ್ನು ನೋಡಿ ಹೌಹಾರಿದರು. 'ಇದೇನು ರಾಜು?' ಎಂದು ಕೇಳಿದಾಗ ಅಮ್ಮ ಆದ್ಯಂತವಾಗಿ ಎಲ್ಲಾ ಕಥೆಯನ್ನು ಹೇಳಿದರು. ಅಪ್ಪ 'ಅಯ್ಯೋ ಫೂಲಿಶ್, ಯಾರಾದ್ರೂ ಹೊಸ ವೈರ್ ತರುವ ಮೊದಲು ಕುರ್ಚಿ ವೈರ್ ಬಿಚ್ತಾರ? ಇಷ್ಟಕ್ಕೂ ಅವನು ಯಾರು ಅಂತಾನೇ ಗೊತ್ತಿಲ್ಲ. ಅವನು ನಾನೂರು ರೂಪಾಯಿ ತಗೊಂಡು ಓಡೋಗ್ತಾನೆ ಅಷ್ಟೆ. ಪೊಲೀಸ್ ಕಂಪ್ಲೆಂಟ್ ಕೊಡಾಣ ಅಂದ್ರೆ ಅವನ ಹಿಂದೆ ಮುಂದೆ ಗೊತ್ತಿಲ್ಲ. ಹೋಗ್ಲಿ ಅವನ ಹೆಸರಾದ್ರು ಕೇಳಿದ್ಯಾ?' ಅಂದಾಗ ಅಮ್ಮ 'ನೀವು ಯಾವಾಗ್ಲು ನನ್ನ ಹಂಗಸ್ತೀರ ಅಷ್ಟೆ. ಇಷ್ಟಕ್ಕೂ ಅವನ ಬ್ಯಾಗು ಇಲ್ಲೆ ಬಿಟ್ಟು ಹೋಗಿದ್ದಾನೆ' ಎಂದು ಸಿಡುಕಿದರು.

'ತೆಗಿ ಅವನ ಬ್ಯಾಗಲ್ಲಿ ಏನಿದೆ ನೋಡಣ' ಅಂತ ಅಪ್ಪ ಅವನ ಚೀಲವನ್ನು ಕೈಗೆತ್ತಿ ನೋಡಿದರು. ಹತ್ತು–ಹದಿನೈದು ಬಣ್ಣ ಬಣ್ಣದ ಕೇನ್‌ವೈರಿನ ತುಣುಕುಗಳು, ಒಂದು ಪುಟ್ಟ ಚಾಕು, ಕತ್ತರಿ, ಆ ಮೇಲೊಂದು ಹೊಸ ಬ್ಲೇಡಿನ ಪ್ಯಾಕೆಟ್ಟು!

ಅಪ್ಪ ಬ್ಲೇಡನ್ನೆತ್ತಿಕೊಂಡು ಗಡ್ಡಕ್ಕೆ ಮುಟ್ಟಿಸಿ 'ಇದೊಂದೆ ನೋಡು ಉಪಯೋಗಕ್ಕೆ ಬರುವುದು, ಐದಾರು ಸಾರಿ ಶೇವಿಂಗ್ ಮಾಡಬಹುದು' ಅಂತ ನಕ್ಕರು.

ಅಮ್ಮ ಪೆಚ್ಚಾದರೂ ತೋರಿಸಿಕೊಳ್ಳದೆ, 'ನೀವು ಯಾವತ್ತು ಹೀಗೇನೆ. ನಾನು ಏನಾದ್ರೂ ಮಾಡಿದ್ರೆ ಅಪನಂಬಿಕೆ. ಏನೋ ಪಾಪ ಬಡವ... ಕೆಲ್ಸ ಮಾಡ್ತೀನಿ ಅಂತ ಬಂದ. ಇಷ್ಟಕ್ಕೂ ಅವನತ್ರ ಎಷ್ಟೊಂದು ಕೇನ್ ವೈರ್ ಇತ್ತು ಗೊತ್ತ? ದೊಡ್ಡ ದೊಡ್ಡ ಬಂಡೆಲ್ ಇಟ್ಟುಕೊಂಡಿದ್ದ. ಸೆಲೆಕ್ಷನ್‌ಗೂ ಬೇಕಾದಷ್ಟು ಕಲರ್‌ಗಳನ್ನು ತೋರಿಸ್ದ. ಅದೆಲ್ಲ ನೋಡೇ ನಾನು ದುಡ್ಡು ಕೊಟ್ಟಿದ್ದು' ಅಂದರು. 'ಅಲ್ಲ ರಾಜು, ಅವನ ಹತ್ರ ಇದ್ದ ದೊಡ್ಡ ಬಂಡಲಿನ ವೈರು ಯಾಕೆ ಬಿಟ್ಟು ಹೋಗ್ಲಿಲ್ಲ ಅವನು? ಆಗ್ಲಾದ್ರೂ ನಿಂಗೆ ಅನುಮಾನ ಬರಲಿಲ್ವ!' ಅಂತ ಕೇಳಿದಾಗ ಅಮ್ಮ ಪೆಚ್ಚಾದರು.

'ನೋಡೋಣ ತಡೀರಿ, ಇನ್ನೊಂದು ಸ್ವಲ್ಪ ಹೊತ್ತಲ್ಲಿ ಬರಬಹುದು' ಅಂದು ಕಾದರು. ಕಾದಿದ್ದೊಂದೇ ಬಂತು... ಅವನ ಪತ್ತೆಯೇ ಇಲ್ಲ! ಅಲ್ಲಲ್ಲಿ ಸ್ವಲ್ಪ ಕಿತ್ತು ಬಂದಿದ್ದರೂ ಕೂತುಕೊಳ್ಳಲು ತೊಂದರೆಯಾಗದ ಕುರ್ಚಿಗಳು ಕೂರಲಾರದಂತೆ ಅಂಗಚ್ಛೇದಗೊಂಡು ನರನಾಡಿಗಳನ್ನು ಕತ್ತರಿಸಿಕೊಂಡಂತೆ ಕಳಾಹೀನವಾಗಿ ಮನೆಯ ಮುಂದೆ ಬಿದ್ದಿದ್ದವು.

ಯಾರೇ ಆಗಲಿ ಜೀವನದಲ್ಲಿ ಒಂದಿಲ್ಲೊಂದು ಸಮಯ ಸಂದರ್ಭದಲ್ಲಿ ಬೇಸ್ತು ಬಿದ್ದೇ ಇರುತ್ತಾರೆ. ಮೂರ್ಖರಾಗುವ ನೆನಪು ಈಗ ಜ್ಞಾಪಿಸಿಕೊಂಡರೆ ನಗು ಬರುತ್ತೆ. ನಾವಿಷ್ಟು ದಡ್ಡರಿದ್ದೇವೆ ಎಂದು ನಮ್ಮನ್ನು ನಾವೇ ಪರೀಕ್ಷಿಸಿಕೊಂಡಾಗ ಸಣ್ಣದೊಂದು ಅಪಮಾನದ ಎಳೆ ಎದೆಯೊಳಗೆ ಹಾದುಹೋಗುತ್ತದೆ.

ಬೇವು ಬೆಲ್ಲಗಳ ಹೂರಣದಂತೆ ಆ ನೆನಪುಗಳು. ಭೂತಕಾಲದ ಆ ಘಟನೆಯನ್ನು ವರ್ತಮಾನದ ಕನ್ನಡಿಯಲ್ಲಿ ನೋಡಿ ಒಂದಿಷ್ಟು ವಿನೋದ, ಇಂತಿಷ್ಟು ವಿಷಾದ.

ಪ್ರತಿಕ್ರಿಯಿಸಿ: feedback@sudha.co.in